ಉಪಕಾರ. ಮದುವೆ ಮಾಡಿ ಜವಾಬ್ದಾರಿ ಕಳೆದುಕೊಂಡೆವು ಅಂದುಕೊಂಡಿದ್ದವರಿಗೆ ಮತ್ತೆ ಜವಾಬ್ದಾರಿ ಸುತ್ತಿಕೊಂಡರೆ?

ಗಂಡ ಸದಾಶಿವ ಚಂಪನನ್ನು ಅದೆಷ್ಟು ಪ್ರೀತಿ ಮಾಡುತ್ತಿದ್ದ ಅಂದರೆ 'ಅತೀ ಆಯ್ತು ನಿಮ್ದು' ಎಂದು ಚಂಪಾ ಹುಸಿಮುನಿಸು ತೋರಿಸುವಷ್ಟು. ಪೇಟೆಗೆ ಹೋದ ಅಂದರೆ ಮನೆಗೆ ಏನಾದರೂ ಸಿಹಿತಿಂಡಿ ಬಂತೆಂದೇ ಲೆಕ್ಕ. ರಾತ್ರಿಯ ಏಕಾಂತದಲ್ಲಿ ಚೀಲದಲ್ಲಿ ಅಡಗಿಸಿಟ್ಟಿದ್ದನ್ನು ತೆಗೆದು ಅವಳಿಗೆ ಕೈಯಾರೆ ತಿನ್ನಿಸುವುದೆಂದರೆ ಅವನಿಗೆ ಮೆಚ್ಚು. ಮನೆಯಲ್ಲಿರುವ ಅಮ್ಮನಿಗೆ ಗೊತ್ತಾಗದಂತೆ ಹೆಂಡತಿಯ ಮೇಲೆ ತನಗಿರುವ ಪ್ರೀತಿಯನ್ನು ನಾನಾ ವಿಧದಲ್ಲಿ ತೋರ್ಪಡಿಸುತ್ತಿದ್ದ ಅವನನ್ನು ನೆನೆದರೆ ಈಗಲೂ ನಿಟ್ಟುಸಿರಿಡುವಂತಾಗುತ್ತದೆ. 'ನಿನ್ನ ಕೈಗೆ ಬಂಗಾರದ ಬಳೆ ಮಾಡಿಸ್ತೀನಿ. ಕೊರಳಿಗೆ ನೆಕ್ಲೇಸು, ಸೊಂಟಕ್ಕೆ ಡಾಬು...' ಎಂದೆಲ್ಲಾ ಕನವರಿಸುತ್ತಿದ್ದವನನ್ನು ಕಂಡರೆ ಅವಳಿಗೆ ನಗೆ. 'ಆಕಾಶಕ್ಕೆ ಏಣಿ ಹಾಕ್ಬೇಡಿ. ನಂಗೆ ಭೂಮಿ ಮೇಲಿರೋದೇ ಇಷ್ಟ' ಅನ್ನುತ್ತಿದ್ದಳು ಚಂಪಾ. ಆರ್ಥಿಕವಾಗಿ ತೌರುಮನೆಗಿಂತಾ ಒಂದು ಗೇಣು ಹೆಚ್ಚಿನ ಎತ್ತರದಲ್ಲಿದ್ದ ಗಂಡನ ಮನೆಯ ಕುರಿತು ಅವಳಿಗೆ ಹೆಮ್ಮೆ, ಅಭಿಮಾನ. ಸುಖವಾಗಿಯೇ ಇದ್ದಳು ಚಂಪಾ. ಅತ್ತೆ ಮಗಳಂತೆ ಅವಳನ್ನು ಹಚ್ಚಿಕೊಂಡಿದ್ದರು. ಇವಳೂ ಅವರಿಗೆ ಹೊಂದಿಕೊಂಡಿದ್ದಳು. ಮೈದುನ ಪೇಟೆ ಸೇರಿಕೊಂಡು ಯಾವುದೋ ಆಫೀಸಿನಲ್ಲಿ ಕೆಲಸ ಮಾಡುತ್ತಿದ್ದ. ಎಲ್ಲಾ ಸುಖವಾಗಿದ್ದಾಗ ಗಂಡನಿಗ್ಯಾಕೆ ಬಂತು ದುರ್ಬುದ್ಧಿ? ಹಣ ಮಾಡಬೇಕೆಂಬ ಹಪಾಹಪಿ ಅವನನ್ನು ಆ ಮಟ್ಟಿಗೆ ಹುಚ್ಚಾಗಿಸಿದ್ದು ಯಾಕೆ? ಅರ್ಥವಾಗುವುದಿಲ್ಲ ಚಂಪನಿಗೆ. ಅವನು ಅಷ್ಟು ಆಳದ ನೀರಿಗೆ ಇಳಿಯುವಂತೆ ಪ್ರೇರೇಪಿಸಿದ್ದು ಯಾರೋ? ಅದಕ್ಕೆ ಬಲಿ ಬಿದ್ದ ಇವನು ಅದಿನ್ನೆಂತಾ ಮರುಳನೋ? ದಡ್ಡನೋ? ಊರಲ್ಲಿ ಯಾರೋ ಸುಳು ಹಿಡಿದು ಸಂಬಂಧಪಟ್ಟ ಇಲಾಖೆಗೆ ಸುದ್ದಿ ಮುಟ್ಟಿಸಿರಬೇಕು. ಏನೊಂದೂ ಗೊತ್ತಿಲ್ಲ ಚಂಪನಿಗೆ. ಆ ಸಂದರ್ಭದಲ್ಲಿ ಬೇಕಾಗಿಯೂ ಇರಲಿಲ್ಲ. ಅವನನ್ನು ಕುರಿತು ಅವಳಲ್ಲಿ ಉಳಿದುಕೊಂಡಿದ್ದ ಭಾವ ಒಂದೇ. ತಿರಸ್ಕಾರ. ಅವನ ಕುರಿತು ಹೇನಾಯ. ಕೂಳಿಗೆ ತತ್ವಾರ ಅನಿಸುವಂತಿದ್ದರೂ ತೌರುಮನೆಯವರು ಮರ್ಯಾದೆಗೆ ಅಂಜಿ ಬದುಕುತ್ತಿದ್ದ ಜನ. ಯಾರಿಂದಲೂ ಬೆಟ್ಟು ತೋರಿಸಿಕೊಳ್ಳದವರು. ಈ ಗಂಡ ಎಲ್ಲರ ಮರ್ಯಾದೆ ಮಣ್ಣುಪಾಲು ಮಾಡಿಬಿಟ್ಟ. ಕಾನಿನ ಅಂಚಿಗೆ ತಗುಲಿಕೊಂಡಂತಿದ್ದ ಗದ್ದೆಯಲ್ಲಿ ಭತ್ತದ ಕೊಯ್ಲು ಮುಗಿದ ನಂತರ ಬೇರೆ ತರಕಾರಿ ಮಡಿಗಳ ಮಧ್ಯೆ ಕದ್ದುಮುಚ್ಚಿ ಗಾಂಜಾ ಬೆಳೆಸಿ ದುಡ್ಡಿನ ಗಿಡ ನೆಟ್ಟವನಂತೆ ಬೀಗುತ್ತಿದ್ದವನು ಆ ಉಬ್ಬಿನಲ್ಲೇ ಇವಳನ್ನು ನಿಲುವಾಭರಣಗಳಿಂದ ಮುಚ್ಚುವ ಮಾತಾಡುತ್ತಿದ್ದನೇನೋ. ಇದೇನು ದಡ್ಡತನವೋ ಅಥವಾ ಹುಂಬತನದ ಅತಿರೇಕವೋ? ಸಾಕ್ಷಿ ಸಮೇತ ಸಿಕ್ಕಿಬಿದ್ದವನು ಎರಡು ವರ್ಷ ಜೈಲಿನ ಕಂಬಿ ಎಣಿಸಿದ. ಅವಮಾನದಿಂದ ಕುದಿಯುತ್ತಿದ್ದ ಚಂಪಾ ತೌರು ಸೇರಿಕೊಂಡಳು. ಈ ಹೊತ್ತಿನಲ್ಲಿ ಅತ್ತಿಗೆ ಕೇಳಿದ ಪ್ರಶ್ನೆ ಅವಳಿಗೆ ನೆನಪಿದೆ,

"ಗಂಡ ಯರ್‍ಯಾರ ಜೊತೆ ಸೇರ್‍ತಾನೆ, ಏನು ಮಾಡ್ತಾನೆ ಅಂತ ನಿಂಗೆ ಗೊತ್ತೇ ಇರ್‍ಲಿಲ್ಲನೇ? ಹೆಂಡತಿ ಅನ್ನಿಸ್ಕೊಂಬಿಟ್ರೆ ಸೈಯಾ? ಗಂಡಂದಿರ ವ್ಯವಹಾರದ ಬಗ್ಗೆ ನಿಗಾ ಇರ್‍ಬೇಕು..."

ಹೆಂಡತಿಗಿಂತಾ ಅದೆಷ್ಟೋ ವರ್ಷ ದೊಡ್ಡವನಾಗಿರುವ ಗಂಡ ಅನ್ನುವ ಪ್ರಾಣಿಗೆ ಸ್ವಂತ ಬುದ್ಧಿ, ವಿವೇಚನಾಶಕ್ತಿ ಇರುವುದಿಲ್ಲವಾ? ಇದ್ಯಾವ ನಿರೀಕ್ಷೆ?

'ಎಲ್ಲಾ ಬಿಟ್ಟ, ಮಗ ಭಂಗಿ ನೆಟ್ಟ' ಚಂಪನ ಮಕ ಕಂಡಾಗಲೆಲ್ಲಾ ಊರಿನ ಪೋಕರಿ ಪಡ್ಡೆಗಳು ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಗೇಲಿ ಮಾಡುತ್ತಿದ್ದುದನ್ನು ನುಂಗಿ ನುಂಗಿ ಗಂಡನ ಬಗ್ಗೆ ಚಂಪನ ಮನಸ್ಸು ಕಹಿವಿಷವಾಗಿ ಹೋಗಿತ್ತು, ಇನ್ನು ಯಾವ ಮಧುರಭಾವನೆಗಳಿಗೂ ಅಲ್ಲಿ ಆಸ್ಪದವಿಲ್ಲವೆನ್ನುವಂತೆ...

★★★

ಅವನು ಜೈಲಿನಿಂದ ಬಿಡುಗಡೆಯಾದ ಸುದ್ದಿ ಚಂಪನ ತೌರುಮನೆಗೆ ಸಿಕ್ಕಿರಲಿಲ್ಲ. ಅವನ ಕುರಿತಾದ